Crl. Misc. 53/2020 PW.1

**ಸಾಕ್ಷಿಯನ್ನು ದಿಃ 03-02-2024 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

ಪಾಟೀ ಸವಾಲುಃ ಶ್ರೀ. ಪಿ. ಎಸ್. ಎನ್. ವಕೀಲರಿಂದ.

1. ನನ್ನ ತಂದೆಗೆ 5 ಜನ ಹೆಣ್ಣು ಮಕ್ಕಳು. ಒಬ್ಬ ಮಗ. ಒಬ್ಬಳಿಗೆ ಮದುವೆ ಆಗಿಲ್ಲ. ನನ್ನ ತಮ್ಮ ಆಟೋ ಓಡಿಸುತ್ತಾನೆ. ನಮ್ಮದು ಮಧ್ಯಮ ವರ್ಗದ ಕುಟುಂಬ. ನಾನು ಮದುವೆಗೆ ಮೊದಲು ಸುದರ್ಶನ್ ಸಿಲ್ಕ್ಸ್ ಮಲ್ಲೇಶ್ವರಂ ನಲ್ಲಿ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ ರೂ. 17,000/- ಸಂಬಳ ಕೊಡುತ್ತಿದ್ದರು. ನನ್ನ ಮತ್ತು ಎದುರುದಾರರ ಮದುವೆ ಎರಡು ಕುಟುಂಬಗಳು ಒಪ್ಪಿ ಮಾಡಿರುವುದು ಎಂದರೆ ಸರಿ. ಎದುರುದಾರರಿಗೆ ಇಬ್ಬರು ಸಹೋದರಿಯರು ಒಬ್ಬ ತಮ್ಮ. ಮದುವೆ ನಂತರ ಬೆಂಗಳೂರಿನಲ್ಲೇ ಸಂಸಾರ ಪ್ರಾರಂಭಿಸಿರುತ್ತೇವೆ. ಬೆಂಗಳೂರಿನಲ್ಲಿ ವಾಸವಿದ್ದು ಮದ್ದೂರಿಗೆ ಮನೆ ವರ್ಗಾಯಿಸಿಲ್ಲ. ಅಲ್ಲಿ ವಾಸವಿರಲಿಲ್ಲ. ನಾನು ತುಂಬು ಕುಟುಂಬಕ್ಕೆ ಹೊಂದಿಕೊಳ್ಳದೇ ಇದ್ದಿದ್ದರಿಂದ ಎದುರುದಾರರು ಮತ್ತು ಅವರ ತಂದೆ ತಾಯಿ ಅವರ ಗ್ರಾಮಕ್ಕೆ ಬಂದು ವಾಸವಾಗಿದ್ದರು ಎಂದರೆ ಸುಳ್ಳು.

2. ಎದುರುದಾರರ ಸಹೋದರಿ ಪಲ್ಲವಿ ರವರು ಕೆಲಸಕ್ಕೆ ಹೋಗುತ್ತಾರೆ ಎನ್ನುವುದು ಸರಿ. ಎದುರುದಾರರ ತಮ್ಮ ಹಂಪಿಯಲ್ಲಿ ವ್ಯಾಸಂಗ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮದ್ದೂರಿನಲ್ಲಿ ಎದುರುದಾರರ ವಿರುದ್ಧ ದೂರು ಕೊಟ್ಟಿದ್ದೆ ಎನ್ನುವುದು ಸರಿ. ಆ ದೂರಿನಲ್ಲಿ ಬೆಂಗಳೂರಿನಲ್ಲಿ ವಾಸವಿದ್ದು ಆಗಾಗ ಬಂದು ಹೋಗುತ್ತೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ದೂರನ್ನು ಕೊಡುವಾಗ ಮದ್ದೂರಿನ ಗ್ರಾಮದ ವಿಳಾಸ ಕೊಟ್ಟಿರುತ್ತೇನೆ ಎಂದರೆ ಸರಿ. ಬೆಂಗಳೂರಿನ ವಿಳಾಸವನ್ನು ಸಹ ಕೊಟ್ಟಿರುತ್ತೇನೆ. ಜಗಳ ಮದ್ದೂರಿನಲ್ಲಿ ಆಗಿದ್ದರಿಂದ ಅಲ್ಲಿನ ವಿಳಾಸ ಕೊಟ್ಟಿರುತ್ತೇನೆ. ದೂರು ಕೊಟ್ಟ ದಿನಾಂಕ 08-10-2017. ಮದುವೆಯಾದ 5 ತಿಂಗಳಿಗೆ ದೂರು ಕೊಟ್ಟಿರುತ್ತೇನೆ ಎಂದರೆ ಮನೆ ಮಾಡಿ ಕರೆದುಕೊಂಡು ಹೋಗಿರುತ್ತೇನೆ ಎಂದು ಹೇಳಿದ್ದರು ಆದರೆ ಕರೆದುಕೊಂಡು ಹೋಗಲಿಲ್ಲ.

3. ಎದುರುದಾರರು ನನಗೆ ಊಟೋಪಚಾರ ಸರಿಯಾಗಿ ಕೊಡದೆ, ಆಸ್ಪತ್ರೆಗೆ ಕರೆದುಕೊಂಡು ಹೋಗದೆ ನಿರ್ಲಕ್ಷ ಮಾಡುತ್ತಿದ್ದಾರೆಂದು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳನ್ನು ದೂರಿನಲ್ಲಿ ಹೇಳಲು ತೊಂದರೆ ಇತ್ತು ಎಂದರೆ ಹೇಳಿರುತ್ತೇವೆ ಎಲ್ಲೋ ಕೈ ತಪ್ಪಿ ಹೋಗಿರುತ್ತದೆ. ಮಾರ್ಚ್ 07

ಅಥವಾ 08 ನೇ ತಾರೀಖು 2018 ರಂದು ಎದುರುದಾರರ ಜೊತೆ ನನ್ನನ್ನು ಕಳುಹಿಸಿದರು. ಎದುರುದಾರರು ನನ್ನನ್ನು ಮನೆಯಿಂದ ಹೊರಗೆ ಹಾಕಿಲ್ಲ. ನಾನೇ ನಿಮ್ಮ ಜೊತೆ ವಾಸವಾಗುವುದಿಲ್ಲ ಎಂದು ಹೊರಗೆ ಬಂದಿರುತ್ತೇನೆ ಎನ್ನುವುದು ಸುಳ್ಳು. ನನ್ನ ಮದುವೆಯಾದ ಒಂದೂವರೆ ತಿಂಗಳಿಗೆ ನನ್ನ ಮಾವ ಮೃತಪಟ್ಟರು. ನನ್ನ ಮುಖ್ಯ ವಿಚಾರಣೆಯಲ್ಲಿ ಜುಲೈ 2018 ರ 2 ನೇ ವಾರದಲ್ಲಿ ಬೈಕ್ ಖರೀದಿಸಲು ರೂ. 50 ಸಾವಿರ ಹೆಚ್ಚುವರಿ ವರದಕ್ಷಿಣೆ ಕೇಳಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಅದು ವರ್ಷ ತಪ್ಪಾಗಿರುತ್ತದೆ 2017 ರಲ್ಲಿ ಕೊಟ್ಟಿರುತ್ತೇವೆ. ವರದಕ್ಷಿಣೆ ಕೇಳಿದ ವಿಚಾರವನ್ನು ದೂರಿನಲ್ಲಿ ಹೇಳಿಲ್ಲ ಆದರೆ ಹಲ್ಲೆ ಮಾಡಿ ಕಿರುಕುಳ ಕೊಟ್ಟ ವಿಚಾರ ದೂರಿನಲ್ಲಿ ಹೇಳಿರುತ್ತೇನೆ.

4. ನಮ್ಮ ಮನೆಯವರು ವರದಕ್ಷಿಣೆ ಕೊಟ್ಟು ಬೆಂಗಳೂರಿನಲ್ಲಿ ಅದ್ದೂರಿಯಾಗಿ ವಿವಾಹ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ವಿವಾಹ ತುಂಬ ಸರಳವಾಗಿತ್ತು, ಎದುರುದಾರರು ಯಾವುದೇ ವರದಕ್ಷಿಣೆ ಪಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯವರು ಆರ್ಥಿಕವಾಗಿ ಸದೃಡವಾಗಿಲ್ಲ ಎಂದು ಬರೆಯಿಸಿರುತ್ತೇನೆ ಎಂದರೆ ಸರಿ. ಆದರೆ ನಾನು ಕೆಲಸಕ್ಕೆ ಹೋಗುತ್ತಿದ್ದೆ. ಎದುರುದಾರರು ಸೆಕ್ಯೂರಿಟಿ ಸೂಪರ್ ವೈಸರ್ ಆಗಿ ಕೆಲಸ ಮಾಡುವ ಬಗ್ಗೆ ದಾಖಲೆ ಕೊಟ್ಟಿಲ್ಲ ಆದರೆ ಮಾಡುತ್ತಿದ್ದಾರೆ. ಎದುರುದಾರರು ಕೆಲಸ ಮಾಡುತ್ತಿದ್ದ ಕಛೇರಿ ಬೇರೆ ಕಡೆಗೆ ವರ್ಗಾಯಿಸಿರುತ್ತಾರೆ ಎಂದು ತಿಳಿದು ಬಂದಿತು. ಎದುರುದಾರರು ಕೋರೋನ ಬಂದ ಸಮಯದಿಂದ ಕೆಲಸ ಕಳೆದುಕೊಂಡು ನಿರುದ್ಯೋಗರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

5. ಎದುರುದಾರರು ಸಂಸಾರಿಕ ಜೀವನ ಮುಂದುವರೆಸಲು ಆದೇಶ ಕೋರಿ ಅರ್ಜಿ ಸಲ್ಲಿಸಿದ್ದರು ಎನ್ನುವುದು ಸರಿ. ನಾನು ಹೋಗಲು ಸಿದ್ದಳಿದ್ದೆ. ನಂತರ ಅವರು ಕರೆದುಕೊಂಡು ಹೋಗಿಲ್ಲ. ಎದುರುದಾರರು ಬೆಂಗಳುರಿನಲ್ಲಿ ಹೆಚ್ಚಿನ ದುಡ್ಡು ವೆಚ್ಚ ಆಗುತ್ತದೆ ಗ್ರಾಮದಲ್ಲೇ ವಾಸವಿರೋಣ ಎಂದು ಗ್ರಾಮಕ್ಕೆ ವಾಪಸ್ಸು ಬಂದರು ಎನ್ನುವುದು ಸುಳ್ಳು. ಆ ಕಾರಣ ಎದುರುದಾರರಿಗೆ ನಾನು ಬೇರೆ ಮನೆ ಮಾಡಿ ಎಂದು ಒತ್ತಾಯ ಮಾಡಿ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಗಾಯತ್ರಿ ನಗರದಲ್ಲಿ ಬೇರೆ ಮನೆ ಮಾಡಿದ್ದರು ಎನ್ನುವುದು ಸರಿ. ಸದರಿ ಮನೆಗೆ ನನ್ನ ತಾಯಿ ನನ್ನನ್ನು ಬಿಡಲು ಕರೆದುಕೊಂಡು ಹೋಗಿದ್ದರು ಆಗ ಎದುರುದಾರರು ಗಲಾಟೆ ಮಾಡಿ ನನಗೆ ಮತ್ತು ನನ್ನ ತಾಯಿಗೆ ಹೊಡೆದು ಕಳುಹಿಸಿದರು. ಎದುರುದಾರರು ಪ್ರತ್ಯೇಕ ಮನೆ ಮಾಡಿ

ಜೀವನ ನಡೆಸುವಂತೆ ಕರೆದರೂ ಸಹ ನಾನು ಹೋಗಲಿಲ್ಲ ಎಂದರೆ ಸರಿಯಲ್ಲ. ನೋಟೀಸ್ ಗೆ ಉತ್ತರ ಕೊಟ್ಟಿರುತ್ತೇನೆ. ಸದರಿ ಜವಾಬು ನೋಟೀಸ್ ನಲ್ಲಿ ನಾನು ಮನೆಗೆ ಹೋದಾಗ ಹೊಡೆದು ಕಳುಹಿಸಿರುವ ವಿಚಾರವನ್ನು ಹೇಳಲು ತೊಂದರೆ ಇರಲಿಲ್ಲ.

6. ನಾನು ಈಗಲೂ ಸಹ ಸುದರ್ಶನ್ ಸಿಲ್ಕ್ಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎನ್ನುವುದು ಸುಳ್ಳು. ನಾನು ರೂಪ್ ಸಂಗಮ್ ನಲ್ಲೂ ಸಹ ಈಗಲೂ ಸಹ ಪಾರ್ಟ್ ಟೈಮ್ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 10 ವರ್ಷ ಕೆಲಸ ಮಾಡಿರುವ ಅನುಭವ ಇದೆ ಎಂದರೆ ಸರಿ. ನನಗೆ ಈಗಲೂ ಸಹ ಸ್ವತಃ ಜೀವನ ನಿರ್ವಹಿಸಿಕೊಳ್ಳಲು ಸಾಮರ್ಥ್ಯನಿದ್ದೇನೆ ಆದರೂ ಸಹ ಎದುರುದಾರರಿಗೆ ತೊಂದರೆ ಕೊಡುವ ಸಲುವಾಗಿ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೇ ಸಂಪಾದನೆ ಇರುವುದರಿಂದ ಜೀವನಾಂಶ ಕೊಡಲು ಸಾಮರ್ಥ್ಯರಿಲ್ಲ ಎಂದರೆ ಸರಿಯಲ್ಲ. ಜಮೀನು ಮನೆ ಇದೆ. ನಾನು ಈಗ 4 – 5 ವರ್ಷಗಳಿಂದಲೂ ಗ್ರಾಮದಲ್ಲಿದ್ದೇನೆ. ಗ್ರಾಮದಲ್ಲೇ ವಾಸವಾಗಿರುವುದರಿಂದ ಸರಳ ಜೀವನ ಮಾಡಬಹುದು ಎನ್ನುವುದು ಸುಳ್ಳು.

7. ನಾನು ಮಗು ಬೇಡ ಎನ್ನುವ ತೀರ್ಮಾಣ ಮಾಡಿಲ್ಲ. ಮದುವೆಯಾದಾಗಿನಿಂದಲೂ ನನ್ನ ಮತ್ತು ಎದುರುದಾರರೊಂದಿಗೆ ಯಾವುದೇ ದೈಹಿಕ ಸಂಪರ್ಕ ಆಗಿಲ್ಲ ಎಂದರೆ ಸರಿಯಲ್ಲ. ಮದುವೆಯಾದ ನಂತರ ನಾನು ದೈಹಿಕ ಸಂಪರ್ಕ ಕ್ಕೆ ಸಹಕರಿಸಿದೆ ನಿರಾಕರಿಸುತ್ತೇನೆ ಎನ್ನುವುದು ಸುಳ್ಳು. ಈ ವಿಚಾರವಾಗಿ ಎದುರುದಾರರು ಹಲವಾರು ಬಾರಿ ಆಪ್ತ ಸಮಾಲೋಚನೆ ಮಾಡಿದರೂ ಸಹ ನಾನು ಸಹಕರಿಸಿಲ್ಲ ಎನ್ನುವುದು ಸುಳ್ಳು. ನಾನು ಎದುರುದಾರರಿಗೆ ನಿನ್ನನ್ನು ಕಂಡರೇ ಆಗುವುದಿಲ್ಲ ಎಂದು ಚುಚ್ಚು ಮಾತುಗಳನ್ನು ಆಡುತ್ತಿದ್ದೆ ಎನ್ನುವುದು ಸುಳ್ಳು. ನಾನು ಯಾವುದೇ ಸಾಂಸಾರಿಕ ಜವಾಬ್ದಾರಿಗಳನ್ನು ನಿಭಾಯಿಸಿಲ್ಲ ಎನ್ನುವುದು ಸುಳ್ಳು. ನಾನು ಪಟ್ಟಣದ ಜೀವನಕ್ಕೆ ಮಾರು ಹೋಗಿ ಎದುರುದಾರರನ್ನು ಬಿಟ್ಟು ನಾನೇ ಹೋಗಿರುತ್ತೇನೆ ಎನ್ನುವುದು ಸುಳ್ಳು.

## ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓದಿ ಹೇಳಿ ಕೇಳಿ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು., ನಾಗಮಂಗಲ.